# ಆಡಿದ್ದು ಒಂದೇ ಮಾತು, ಆಡಲಾಗದ್ದು ಸಾವಿರ ಮಾತುಗಳು...

ಕತ್ತಲೊಳು ನನ್ನ ಕಣ್ಣಮುಂದಿರುವ ಪುಟ್ಟ ಹಣತೆ ನೀನು...
ಉಸಿರಾಡಲೂ ಹೆದರಿ ಸಾಯುತಿದ್ದೇನೆ ನಾನು,
ನನ್ನ ಸಣ್ಣದೊಂದು ಉಸಿರೂ ನಿನ್ನ ಅಲುಗಿಸಿ ಹೆದರಿಸಬಾರದಲ್ಲ (ನಮ್ಮಿಬ್ಬರನೂ?)...

ಇದೆಲ್ಲ ಬರೆಯಲು ಅಥವಾ ಕಲ್ಪಿಸಿಕೊಳ್ಳಲು ನನಗೆ ಹಕ್ಕಿದೆಯೋ ಇಲ್ಲವೋ ಗೊತ್ತಿಲ್ಲ, ಆದರೂ ಈ ಛಳಿಯ ಮುಂಜಾವುಗಳಲ್ಲಿ, ಇಳಿ ಸಂಜೆಯ ಒಂಟಿತನದಲ್ಲಿ ನೀನು ನೆನಪಾಗುತ್ತೀಯ, ಮನಸನ್ನು ಬೆಚ್ಚಗಾಗಿಸಿ ಹೃದಯದ ನಾಗಾಲೋಟಕ್ಕೆ ಕಾರಣವಾಗುತ್ತೀಯ ಮತ್ತು ಇದನೆಲ್ಲ ನೆನೆಸಿಕೊಳ್ಳುವಂತೆ ಮಾಡುತ್ತೀಯ.

ಗೆಳತೀ ನಿನಗೆ ಗೊತ್ತಿಲ್ಲ, ನಾನು ಮೊದಲೆಲ್ಲ ಒಂಟಿತನವನ್ನೆಷ್ಟು ಪ್ರೀತಿಸುತ್ತಿದ್ದೆ ಅಂತ. ನನ್ನ ಪೇಂಟಿಂಗ್, ಅವಿರತ ಓದು, ಬರವಣಿಗೆ ಎಲ್ಲಕ್ಕೂ ನನ್ನ ಒಂಟಿತನ ಎಷ್ಟೊಂದು ಸಹಕಾರಿಯಾಗಿತ್ತು ಗೊತ್ತೇ? ಈಗ ಅದೇ ಒಂಟಿತನದಲ್ಲಿ ಯಾವುದನ್ನೂ ಮಾಡಲಾಗದೇ ತತ್ತರಿಸಿ ಹೋಗುತ್ತೇನೆ, ಸ್ನೇಹಿತರಿಗೆ ಫೋನು ಮಾಡುತ್ತೇನೆ; ಎಸ್ಸೆಮೆಸ್ ಕಳಿಸಲಾರಂಭಿಸುತ್ತೇನೆ...

ನಿನಗೂ ಒಂದು ಎಸ್ಸೆಮೆಸ್ ಮಾಡೋಣ ಅಂದರೆ, ನಿನ್ನಿಂದ ನನ್ನ್ಯಾವ ಹಳೆಯ ಎಸ್ಸೆಮೆಸ್‌ಗಳಿಗೂ ಉತ್ತರ ಬಂದಿಲ್ಲ ಎಂದು ಯೋಚಿಸಿ ಸುಮ್ಮನಾಗುತ್ತೇನೆ; ಏನನ್ನು ಕಳಿಸಲಿ, ಏನನ್ನು ಬಯಸಲಿ?

ಫೋನು ಮಾಡಿದರೋ ನಾನು ಹೃದಯದ ಗರ್ಭಗುಡಿಯ ಪ್ರಾಣಮೂರ್ತಿಯ ಮುಂದೆ ಮಾತನಾಡಲಾಗದೇ ತೊದಲುತ್ತ ನಿಂತ ಭಕ್ತ, ನೀನೋ ನಾನೇ ಕೋರಿಕೆ ಸಲ್ಲಿಸಲಿ ಎಂದು ಬಿಮ್ಮನೆ ನಿಂತೇಬಿಡುವ ದೇವತೆ... ಏನೇನೋ ಮಾತನಾಡಬೇಕು, ಹೇಗೇಗೋ ಮಾತನಾಡಬೇಕೆಂದು ಫೋನಾಯಿಸಿ ಏನನ್ನೂ ಮಾತನಾಡಲಾಗದೇ ನನ್ನೆಲ್ಲ ಮಾತುಗಳಿಗೂ ಹೊಸ ಹೊಳಹು ಹೊಳೆದು, ಅವೆಲ್ಲ ನಿನಗೆ ಅರ್ಥವಾಗಿ ಅನರ್ಥವಾಗಿಬಿಟ್ಟರೆ ಎಂದು ಹೆದರಿ ಬೇರೆ ಏನೇನೋ ಮಾತನಾಡತೊಡಗುತ್ತೇನೆ, ನೀನು ಸುಮ್ಮನೆ ಕೇಳಿಸಿಕೊಳ್ಳುತ್ತೀಯ. ಒಮ್ಮೊಮ್ಮೆ ಸಣ್ಣ ಸಣ್ಣ ಆಣಿಮುತ್ತುಗಳ ಬಿಸಾಕುತ್ತೀಯ. ಕೊನೆಗೆ ನನ್ನ ಕಸಿವಿಸಿ ಅರ್ಥವಾಗಿ, ನಿನಗೂ ಕಸಿವಿಸಿಯಾಗಿ, ನೀನಾಗೇ 'ಮತ್ತೆ ಸಿಗೋಣ'ವೆಂದೋ 'ಕ್ಯಾಚ್ ಯು ಲೇಟರ್' ಎಂದೋ ಉಸುರಿಬಿಡುತ್ತೀಯ. ಜಾನು ಸೋತ ಧ್ವನಿಯಲ್ಲಿ 'ಬೈ' ಅನ್ನುತ್ತೇನೆ, ನಮ್ಮಿಬ್ಬರಿಗೂ ಗೊತ್ತು, ಮತ್ತೊಮ್ಮೆ ನಾನೇ ನಿನ್ನನ್ನು 'ಕ್ಯಾಚ್' ಮಾಡಬೇಕು, ನೀನ್ಯಾವತ್ತಾದರೂ ಫೋನ್ ಮಾಡಿದ್ದೀಯಾ?

ಇದ್ದುದರಲ್ಲಿ ಚಾಟೇ ವಾಸಿ (ಅದರಲ್ಲೂ ನಾನೇ ನಿನ್ನನ್ನು ಮಾತಿಗೆಳೆಯಬೇಕು). ಮೂರ್ನಾಲ್ಕು 'ಹಾಯ್', 'ಹೆಲೋ'ಗಳಿಗೆ ತಪಸ್ಸಿಗೊಲಿದ ದೇವತೆಯಂತೆ ಪುಟ್ಟದೊಂದು 'ಹಾಯ್'. ನಂತರವೂ ನಾನೇ ಶುರುಮಾಡಬೇಕು, 'ಹೇಗಿದೀಯಾ?', 'ಚೆನ್ನಾಗಿದೀನಿ, ಥ್ಯಾಂಕ್ಸ್!'. ಥೇ, ಹೇಗಪ್ಪಾ ಮುಂದುವರಿಸೋದು ಅಂತಾ ತಲೆ ಕೆಡಿಸಿಕೊಳ್ಳುವಷ್ಟರಲ್ಲಿ ದಾರಿ ತೋರಿಸಿಬಿಡುತ್ತೀಯ, 'ನೀನು?', 'ಓ ನಾನಾ? ಫೈನ್'. ಮೆಲ್ಲನೆ ಗಂಟುಕಟ್ಟಿದ ತಲೆಗೂದಲ ಸಿಕ್ಕುಬಿಡಿಸಿದಂತೆ ಸಂಭಾಷಣೆ ಸಾಗುತ್ತದೆ. ನೀನು ಟೈಪಿಸುವ ತನಕ ನನಗೂ ನಾನು ಟೈಪಿಸುವ ತನಕ ನಿನಗೂ ಯೋಚಿಸಲು ಸಮಯ. ವಿಷಯಗಳು ಖಾಲಿಯಾಗದಂತೆ ಮೆಲ್ಲನೆ ಟೈಪಿಸುತ್ತೇನೆ, ನೋಡುತ್ತಿದ್ದಂತೆ, ಪ್ರಶ್ನೆಗಳು, ಸಂದೇಹಗಳು(ಸಂದೇಶಗಳು), ಸ್ಮೈಲಿಗಳದೊಂದು ಉದ್ದನ್ನ ಚಾಟ್ ಹಿಸ್ಟರಿಯೇ ತಯಾರಾಗುತ್ತದೆ(ಮುಂದ್ಯಾವತ್ತಾದರೊಮ್ಮೆ ನಿನಗೆಅವೆಲ್ಲ ಹಿಸ್ಟರಿಗಳನ್ನು ತೋರಿಸುತ್ತೇನೆ ☺) ನಾನು ನಿನ್ನೊಡನೆ ಚಾಟ್ ಮಾಡುತ್ತಿರುವಾಗಲೆಲ್ಲ ಉಕ್ಕಿಬಂದ ಸಂತೋಷವನ್ನು ತಡೆದುಕೊಳ್ಳಲಾರದೇ ನಸುನಗುತ್ತಿರುತ್ತೇನೆ, ನನ್ನ ಹೃದಯದ ಉಗಿಬಂಡಿಗೆ ನೂರು ಮೈಲಿ ವೇಗ...!

ಮೊನ್ನೆಯಂತೂ ಅನಾಹುತ ಆಗೇ ಬಿಡುತ್ತಿತ್ತು. ಹೊಸಾ ಕಾರ್ಟೂನು ಪಿಚ್ಚರ್ ನೋಡಿದ್ಯಾ ಅಂತಾ ನಾನು ಕೇಳಿದ್ದಕ್ಕೆ ನೀನು 'ಇಲ್ಲ, ನೀನು?' ಅಂತ ಮರುಪ್ರಶ್ನೆಹಾಕಿದ್ಯಲ್ಲ, ನಾನು ಕೈತಪ್ಪಿ ಟೈಪಿಸಿಯೇ ಬಿಟ್ಟಿದ್ದೆ, 'ನಾನೂ ನೋಡಿಲ್ಲ, how about this weekend?'. ಮರುಕ್ಷಣವೇ ಎಚ್ಚೆತ್ತುಕೊಂಡು ಅದನ್ನು ಅಳಿಸಿಹಾಕಿ 'ನಾನೂ ನೋಡಿಲ್ಲ' ಅಂತಾ ಮಾತ್ರ ಕಳಿಸಿದೆ ☺ ಮನೆಗೆ ಬಂದಿರುವ ನೆಂಟರೊಂದಿಗೆ ಮೆಲ್ಲಮೆಲ್ಲನೆ ಹೊಂದಿಕೊಳ್ಳುತ್ತಿರುವ ಪುಟ್ಟಮಗುವನ್ನು ತಟ್ಟನೆತ್ತಿ

ಮುದ್ದಾಡಿಬಿಟ್ಟರೆ ಮಿತಿಮೀರಿದರೆ ಅಃಡು ಮತ್ತೆ ನಮ್ಮ ತೆಕ್ಕೆಗೆ ಬಂದೀತೇ? ಹ್ಯಾರಿ ಪಾಟರ್ ನಾಲ್ಕನೇ ಭಾಗವನ್ನಂತೂ ಒಟ್ಟಿಗೆ ನೋಡಲಾಗಲಿಲ್ಲ. ಆದರೆ ಭರವಸೆ ಕಂಡಿತಾ ಇದೆ; ಹ್ಯಾರಿ ಪಾಟರ್ ಐದನೇ ಭಾಗ ಇನ್ನೆಂಟು ತಿಂಗಳಿಗೇ ಬರುತ್ತೆ!

ಚಾಟ್ ಮಾಡುತ್ತಾ, ಮಾಡುತ್ತಾ ನೀನು ಮೆಲ್ಲನೇ ತೆರೆದುಕೊಳ್ಳುತ್ತೀ, ಇಷ್ಟಿಷ್ಟೇ! ನಾನು ಸುಮ್ಮನೆ ' ಹೂಂ, ಟಡಿಡಿ ' ಅನ್ನಬೇಕು, ಮಧ್ಯದಲ್ಲೇನಾದರೂ ಪ್ರಶ್ನೆಹಾಕಿದರೆ ಜಾಗೃತವಾಗಿಬಿಡುತ್ತೀ, 'ಓ, ನನ್ನದು ಲೆಚ್ಚರಿಂಗೇ ಆಗೋಯ್ತು' ಅಂತಾ ವಿಷಯ ಅಲ್ಲಿಗೇ ಬಂದ್!

ಎಲ್ಲ ಮಾತೂ ಮುಗಿದು (ಆಡಲಾರದ ಸಾವಿರ ಮಾತುಗಳು ನನ್ನೆದೆಯೊಳಿದ್ದೂ) ನಾನು ಮುಗಿಸಲಾರದೇ, 'ಇನ್ನೇನು?, ಇನ್ನೇನು?' ಎಂದು ಗುಣಗುಣಿಸುತ್ತಿದ್ದಂತೆಯೇ ನನ್ನ ಕಸಿವಿಸಿ ಅರ್ಥವಾಗಿ, 'ಓಕೆ, ಮೀಟಿಂಗ್ ಇದೆ'ಯೆಂತಲೋ, 'ಕಾಫಿಗೆ ಹೋಗ್ತಿದೀನಿ'ಯೆಂತಲೋ ಅಥವಾ 'ಕ್ಯಾಚ್ ಯು ಲೇಟರ್' ಅಂತಲೋ ಮಾತು ಮುಗಿಸಿಬಿಡುತ್ತೀ ನಾನು ಸಂತೋಷದ ಏದುಸಿರುಬಿಟ್ಟು ಉಸಿರು ಸಿಕ್ಕಿಕೊಂಡು ಉಬ್ಬಿದೆದೆಯನ್ನು ನಿರಾಳಮಾಡಿಕೊಳ್ಳುತ್ತೇನೆ, ಮತ್ತೆ ಮುಂದಿನ ಸೋಮವಾರದ ತನಕ ಕಾಯುತ್ತೇನೆ. ಸೋಮವಾರವಾದರೆ ಮಾತನಾಡಲು ತುಂಬಾ ವಿಷಯವಿರುತ್ತದೆ, ವಾರಾಂತ್ಯದಲ್ಲಿ ಏನೇನು ಮಾಡಿದೆಯೆಂತೆಲ್ಲ ವಿಚಾರಿಸಿಕೊಳ್ಳಬಹುದೆಂದು ಲೆಕ್ಕ ಹಾಕುತ್ತೇನೆ...

ಈ ವಾರ ಮೊದಲೇ ಕೇಳುತ್ತಿದ್ದೇನೆ, ಈ ವಾರಾಂತ್ಯಕ್ಕೇನು ಪ್ಲಾನು? ಹೊಸ ವರುಷ ಬರ್ತಾ ಇದೆ, ಗೆಳತೀ ಹೃದಯ ಪೂರ್ವಕವಾಗಿ ಹಾರೈಸುತ್ತಿದ್ದೇನೆ, 'ನಿನ್ನ ಕನಸು ಕಂಗಳೊಳಗಿನೆಲ್ಲ ಕನಸುಗಳು ನನಸಾಗಲಿ' ಮತ್ತು ಮುಖ್ಯವಾಗಿ ಇದನ್ನೆಲ್ಲವನ್ನೂ (ಮತ್ತು ಎದೆಯೊಳಗಿನ ಸಾವಿರ, ಸಾವಿರ ಮಾತುಗಳನ್ನೂ) ನಿನ್ನೆದುರು ನಿವೇದಿಸಿಕೊಳ್ಳುವ ಧೈರ್ಯ ನನ್ನಲ್ಲಿ ಮೂಡುವ ತನಕ ನಿನಗೆ ಆತ್ಮಬಂಧುವಿನಂತಹ ಗೆಳೆಯ ಸಿಗದಿರಲಿ (ಸ್ವಾರ್ಥಿ ನಾನು! ☺)

"ಹೊಸ ವರ್ಷದ ಶುಭಾಶಯಗಳು!'